

بسم اللهِ الرّحمٰنِ الرّحيم

# ಮಹ್‌ಮೂದ್ ಅಹ್ಮದ್ ಶಾಹಿದ್ ಸಾಹಿಬ್ – ಒಬ್ಬ ನಿಷ್ಠಾವಂತ ಅಹ್ಮದಿ

**(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ 25-04-14 ರಂದು ನೀಡಿದ ಜುಮುಅ ಖುತುಬದ ಸಾರಾಂಶ)**

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಇಂದು ನಾನು ಅತ್ಯಂತ ಪ್ರಿಯರಾದ ಒಬ್ಬರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಅವರು ಅತ್ಯಂತ ನಿಷ್ಠಾವಂತರಾಗಿದ್ದ ಕಾರಣ ಒಂದು ವಿಶಿಷ್ಟ ಸ್ಥಾನವನ್ನು ಹೊಂದಿದ್ದರು. ಅವರು ಜಮಾಅತಿಗೋಸ್ಕರ ಆತ್ಮಾರ್ಪಣೆ ಮಾಡಿದ ಸೇವಕರಾಗಿದ್ದರು. ಎರಡು ದಿನಗಳ ಹಿಂದೆ ಅವರು ನಿಧನ ಹೊಂದಿದರು. ಇನ್ನಾಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್. ಪ್ರತಿಯೊಬ್ಬ ಮನುಷ್ಯ ಈ ಲೋಕವನ್ನು ಬಿಟ್ಟು ಹೋಗಲಿಕ್ಕಿದೆ. ಆದರೆ ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನ ಮಾಡುತ್ತಾ ಜೀವಿಸುವ ಮನುಷ್ಯರು ಎಷ್ಟು ಅದೃಷ್ಟಶಾಲಿಗಳಾಗಿದ್ದಾರೆ. ಅವರು ಪ್ರತಿಜ್ಞೆ ಮಾಡಿದರೆ ಆ ಪ್ರತಿಜ್ಞೆಯನ್ನು ಈಡೇರಿಸಲು ತಮ್ಮ ಸಂಪೂರ್ಣ ಶಕ್ತಿಸಾಮರ್ಥ್ಯಗಳನ್ನು ಬಳಸುತ್ತಾರೆ. ಅವರು ಧರ್ಮಕ್ಕೆ ಸೇವೆ ಮಾಡುವುದರ ಜೊತೆಗೆ ಮಾನವರ ಸೇವೆ ಮಾಡಲು ಸಹ ಯಾವಾಗಲೂ ಪ್ರಯತ್ನ ಮಾಡುತ್ತಾ ಇರುತ್ತಾರೆ. ಅವರು ಎಂತಹ ಜನರೊಂದಿಗೆ ಸೇರುತ್ತಾರೆಂದರೆ ಲೋಕದ ಜನರು ಅವರನ್ನು ಹೊಗಳುತ್ತಾರೆ. ಈ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದ ಪ್ರಕಾರ ಇಂತಹ ಜನರಿಗೆ ಸ್ವರ್ಗವು ಲಭಿಸುತ್ತದೆ. ಅಹ್ಮದಿಯಾ ಜಮಾಅತಿನ ಈ ಸೇವಕರು ಆಯಾ ಕಾಲದ ಖಲೀಫರ ಸುಲ್ತಾನೇ ನಸೀರ್ ಆಗಿದ್ದರು. ಅವರು ಖಿಲಾಫತ್ ಬಗ್ಗೆ ಅತ್ಯಂತ ಅಭಿಮಾನ ಹೊಂದಿದವರಾಗಿದ್ದರು. ನಮ್ಮ ಆ ಪ್ರಿಯ ಸಹೋದರನ ಹೆಸರು ಮುಕರ್ರಮ್ (ಆದರಣೀಯ) ಮಹ್‌ಮೂದ್ ಅಹ್ಮದ್ ಶಾಹಿದ್ ಸಾಹಿಬ್ ಎಂದಾಗಿತ್ತು. ಪಾಕಿಸ್ತಾನದಲ್ಲಿ ಜನರು ಅವರನ್ನು ಮಹ್‌ಮೂದ್ ಬಂಗಾಲಿ ಎಂಬ ಹೆಸರಿನಿಂದ ಸ್ಮರಿಸುತ್ತಿದ್ದರು. ಪ್ರಸ್ತುತ ಅವರು ಆಸ್ಟ್ರೇಲಿಯ ಜಮಾಅತಿನ ಅಮೀರ್ ಆಗಿದ್ದರು. ಏಪ್ರಿಲ್ ದಿನಾಂಕ 23ರಂದು ಅಲ್ಲಿಯೇ ಅವರು ನಿಧನ ಹೊಂದಿದರು – ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ಮೃತರಾದನಂತರ ಓರ್ವ ಮಿತ್ರರಿಂದ ಬಂದ ಪ್ರಥಮ ಪತ್ರದಲ್ಲಿ "ಮಹ್‌ಮೂದ್ ಅಹ್ಮದ್ ಶಾಹಿದ್ ಸಾಹಿಬರು ಖಿಲಾಫತ್ ಬಗ್ಗೆ ಎಂತಹ ನಿಷ್ಠೆ ಹೊಂದಿದ್ದರೆಂದರೆ ಅವರ ಹಾಗೆ ನಿಷ್ಠಾವಂತರಾಗಲು ಅಲ್ಲಾಹನು ನಮಗೆ ಸಹ ಅನುಗ್ರಹ ನೀಡಲಿ ಎಂದು ಬರೆದಿದ್ದರು." ನಾನು ಆ ಪತ್ರಕ್ಕೆ ಹೀಗೆ ಉತ್ತರ ನೀಡಿದೆ. ಅವರು ನಾಡಿ ಬಡಿತದ ಹಾಗೆ ಚಲಿಸುತ್ತಿದ್ದರು. ಖಲೀಫರು ಈರೀತಿ ಏಕೆ ಆಜ್ಞಾಪಿಸಿದರು. ಈರೀತಿ ಆಜ್ಞಾಪಿಸಿದುದರ ಕಾರಣವೇನು ಎಂಬ ಭಾವನೆ ಅವರ ಹೃದಯದಲ್ಲಿ ಯಾವತ್ತೂ ಮೂಡುತ್ತಿರಲಿಲ್ಲ. ಅವರ ಸ್ವಂತ ಇಷ್ಟಕ್ಕೆ ವಿರುದ್ಧವಾಗಿ ಏನನ್ನಾದರೂ ಹೇಳಿದರೆ ಸಹ ಕೂಡಲೆ ಅವರು ಅದನ್ನು ಈಡೇರಿಸುತ್ತಿದ್ದರು. ಅವರ ಕಾಯಿಲೆ ಮತ್ತು ಮರಣದ ಬಗ್ಗೆ ಸ್ವಲ್ಪ ವಿವರಿಸುತ್ತೇನೆ. ಏಪ್ರಿಲ್ 22ರಂದು ಸಿಡ್ನಿಯ ಮಿಶನ್ ಹೌಸ್‌ನಿಂದ ಅಸರ್ ನಮಾಝ್‌ಗೋಸ್ಕರ ಮಸ್‌ಜಿದ್ ಕಡೆಗೆ ಹೊರಟರು. ಸ್ವಲ್ಪ ನಡೆದ ನಂತರ ಆರೋಗ್ಯ ಸರಿಯಿಲ್ಲವೆಂದು ಹೇಳುತ್ತಾ ಮನೆಗೆ ಮರಳಿದರು. ಮನೆಗೆ ತಲಪಿದ ಕೊಡಲೆ ಬ್ರೈನ್ ಹೆಮರೇಜ್ ಉಂಟಾಯಿತು. ಮೊದಲೇ ಅವರು ಡಯಬಿಟೀಸ್ ಮತ್ತು ಬ್ಲೆಡ್‌ಪ್ರಶರ್ ರೋಗಿಯಾಗಿದ್ದರು. ಅವರನ್ನು ಆಸ್ಪತ್ರೆಗೆ ಕೊಂಡುಹೋಗಿ ವೆಂಟಿಲೇಟರ್‌ನಲ್ಲಿ ಇರಿಸಲಾಯಿತು. ಡಾಕ್ಟರ್‌ಗಳ ಅಭಿಪ್ರಾಯ ಪ್ರಕಾರ ಬ್ರೈನ್ ಹೆಮರೇಜ್ ಆಗಿರುವ ಮೆದುಳಿನ ಭಾಗ ನಿಷ್ಕ್ರಿಯೆಗೊಂಡಿತ್ತು. ಆದರೂ 24 ಗಂಟೆಗಳ ಕಾಲ ವೆಂಟಿಲೇಟರ್‌ನಲ್ಲಿ ಇಟ್ಟು ಅವರನ್ನು ಸುಧಾರಣೆ ಮಾಡಲು ಪ್ರಯತ್ನಿಸಿರಿ, ಅದಕ್ಕಿಂತ ಹೆಚ್ಚು ಬೇಡ ಎಂದು ನಾನು ಹೇಳಿದೆ. 24 ಗಂಟೆಗಳ ನಂತರ ಅವರನ್ನು ವೆಂಟಿಲೇಟರ್‌ನಿಂದ ಇಳಿಸಿದಾಗ ಎರಡು ಮಿನಿಟಿನೊಳಗೆ ಅವರು ಅಲ್ಲಾಹನ ಸನ್ನಿಧಿಗೆ ಹಾಜರಾದರು.

ಮಹ್ಮೂದ್ ಸಾಹೇಬರು 1948 ನವೆಂಬರ್ ದಿನಾಂಕ 18ರಂದು ಬಂಗ್ಲಾದೇಶದ ಚಾಂದ್‌ಪುರ ಜಿಲ್ಲೆಯ ಚಾರ್‌ದಖಿಯದಲ್ಲಿ ಜನಿಸಿದರು. ಅವರ ತಂದೆಯ ಹೆಸರು ಮೌಲಾನ ಅಬುಲ್ ಖೈರ್ ಮುಹಮ್ಮದ್ ಮುಹಿಬ್ಬುಲ್ಲಾ ಎಂದಾಗಿತ್ತು. ತಾಯಿಯ ಹೆಸರು ಝೈಬುನ್ನಿಸಾ ಎಂದಾಗಿತ್ತು. ಅವರ ತಂದೆ ಅಬುಲ್ ಖೈರ್ ಮುಹಮ್ಮದ್ ಮುಹಿಬ್ಬುಲ್ಲಾ ಸಾಹೆಬರು 1943ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರ ಆರಂಭದ ಹೆಸರು ಅಬುಲ್ ಖೈರ್ ಮುಹಮ್ಮದ್ ಎಂದಾಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಅವರ ಹೆಸರಿಗೆ ಮುಹಿಬ್ಬುಲ್ಲಾ ಎಂದು ಸೇರಿಸಿದರು. ಅವರು ಉನ್ನತ ಶ್ರೇಣಿಯ ವಿದ್ವಾಂಸರಾಗಿದ್ದರು. ಅವರಿಗೆ ತಬ್ಲೀಗ್ ಮಾಡುವ ಬಹಳ ಉತ್ಸಾಹವಿತ್ತು. ಅವರು ತಬ್ಲೀಗ್ ಮಾಡಿ ತನ್ನ ಪಿತ ಖ್ವಾಜಾ ಅಬ್ದುಲ್ ಮನ್ನಾನ್ ಸಾಹೇಬರನ್ನು ಎಂದರೆ ಮಹ್ಮೂದ್ ಸಾಹೇಬರ ಅಜ್ಜನವರನ್ನು ಅಹ್ಮದಿಯತ್ತಿನ ಪ್ರಕಾಶದಿಂದ ಅನುಗ್ರಹಗಳಿಸುವಂತೆ ಮಾಡಿದರು. ಖ್ವಾಜಾ ಅಬ್ದುಲ್ ಮನ್ನಾನ್ ಸಾಹೇಬರು ಉತ್ತರ ಪ್ರದೇಶದ ಸಹರಾನ್‌ಪುರದಲ್ಲಿ ಕಲಿಯಲು ಹೋಗಿದ್ದಾಗ ಅಲ್ಲಿ ಅವರಿಗೆ ಅಹ್ಮದಿಯಾ ಜಮಾಅತ್ ಬಗ್ಗೆ ಸಂದೇಶ ಲಭಿಸಿತ್ತು. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜೀವಿಸಿದ್ದ ಕಾಲವಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ದೆಹಲಿಗೆ ಭೇಟಿ ನೀಡಿದಾಗ ಖ್ವಾಜಾ ಅಬ್ದುಲ್ ಮನ್ನಾನ್ ಸಾಹೇಬರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಬೇಕೆಂಬ ಆಶೆ ಉಂಟಾಗಿತ್ತು. ಆದರೆ ಅವರು ಕಲಿಯುತ್ತಿದ್ದ ವಿಧ್ಯಾಲಯದ ಅಧಿಕಾರಿಗಳು ಅವರಿಗೆ ಅನುಮತಿ ನೀಡಲಿಲ್ಲ. ಅವರು ಅಹ್ಮದಿ ಆದ ನಂತರ ಹೇಳುತ್ತಿದ್ದರು: "ಜನರು ನಮ್ಮನ್ನು ಈ ಅನುಗ್ರಹದಿಂದ ವಂಚಿತರನ್ನಾಗಿ ಮಾಡಲು ಪ್ರಯತ್ನಿಸಿದರು. ಆದರೆ ಅಲ್ಲಾಹನು ನಮಗೆ ಈ ಅನುಗ್ರಹವನ್ನು ದಯಪಾಲಿಸಿದನು" ಎಂದು.

ಹರ್ಝ್‌ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ಉಪದೇಶ ಪ್ರಕಾರ ಜನಾಬ್ ಮಹ್‌ಮೂದ್ ಅಹ್ಮದ್ ಶಾಹಿದ್ ಸಾಹೇಬರನ್ನು 1954ರಲ್ಲಿ ಅವರ ತಂದೆಯವರು "ವಕ್‌ಫೇ ಜೇಲಾದ್"(ಮಕ್ಕಳ ವಕ್‌ಫ್) ಯೋಜನೆ ಪ್ರಕಾರ ಜಮಾಅತಿಗೆ ವಕ್‌ಫ್ ಮಾಡಿದರು. ಮಹ್ಮೂದ್ ಅಹ್ಮದ್ ಶಾಹಿದ್ ಸಾಹೇಬರು ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ತನ್ನ ಊರಿನಲ್ಲಿಯೇ ಪಡೆದರು. 1962ರಲ್ಲಿ ಅವರು ಇನ್ನೂ ಬಾಲಕನಾಗಿರುವಾಗಲೇ ರಬ್‌ವದ ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶಿಸಿದರು. 1974ರಲ್ಲಿ ಅವರು ಶಾಹಿದ್ ಬಿರುದು ಪಡೆದರು. 1977ರಲ್ಲಿ ಬಂಗ್ಲಾದೇಶದ ಅಮೀರ್ ಆಗಿದ್ದ ಮೌಲವಿ ಮುಹಮ್ಮದ್ ಸಾಹೇಬರ ಪುತ್ರಿ ಹಾಜಿರರನ್ನು ವಿವಾಹವಾದರು. ಅವರಿಗೆ ಮೂವರು ಹೆಣ್ಣು ಮಕ್ಕಳು ಮತ್ತು ಒಬ್ಬ ಪುತ್ರನಿದ್ದಾನೆ. ಅವರೆಲ್ಲರೂ ಅಲ್ಲಾಹನ ಅನುಗ್ರಹದಿಂದ ವಿವಾಹಿತರಾಗಿದ್ದಾರೆ ಮತ್ತು ಜಮಾಅತಿನ ಸೇವೆಯನ್ನು ಉತ್ಸಾಹದಿಂದ ಮಾಡುವವರಾಗಿದ್ದಾರೆ.

ಮಹ್‌ಮೂದ್ ಸಾಹೇಬರು ತನ್ನ ಜೀವಿತದ ಬಗ್ಗೆ ಕೆಲವು ವಿಷಯಗಳನ್ನು ತನ್ನ ಅಳಿಯನಿಗೆ ಹೇಳಿ ಬರೆಸಿದ್ದರು. ಅವರು ಹೀಗೆ ಹೇಳುತ್ತಾರೆ: ರಬ್ವದಲ್ಲಿ ಜಾಮಿಅ ಅಹ್ಮದಿಯಾದಲ್ಲಿ ಕಲಿಯುತ್ತಿದ್ದಾಗ ಫುಟ್‌ಬಾಲ್ ಆಡುವಾಗ ಒಮ್ಮೆ ಅವರ ಮೊಣಕಾಲಿಗೆ ತೀವ್ರ ಗಾಯ ಉಂಟಾಗಿತ್ತು. ಕಾಯಿಲೆ ವರ್ಧಿಸಿದ ಕಾರಣ ತನ್ನ ದೇಶಕ್ಕೆ ಮರಳಿ ಹೋದರು. ಆ ಕಾಲದಲ್ಲಿ ರಬ್‌ವದ ವಾತಾವರಣ ಬಹಳ ಕಠಿಣವಾಗಿತ್ತು. ನೀರು ಉಪ್ಪು ಮಿಶ್ರಿತವಾಗಿತ್ತು. ಸಿಹಿನೀರು ದೊರಕುತ್ತಿರಲಿಲ್ಲ. ಹೊಟ್ಟೆಯಲ್ಲಿ ಆಗಾಗ ನೋವುಂಟಾಗುತ್ತಿತ್ತು. ತಂದೆ ತಾಯಂದಿರು ಸಹ ದೂರವಿದ್ದುದರಿಂದ ಅವರ ನೆನಪಾಗುತ್ತಿತ್ತು. ಕಾಲಿಗೆ ಗಾಯವಾಗಿ ಊರಿಗೆ ಮರಳಿ ಹೋದಾಗ ರಬ್‌ವಕ್ಕೆ ಹಿಂದಿರುಗಿ ಬರಲು ಅವರಿಗೆ ಮನಸ್ಸಿರಲಿಲ್ಲ. ಆಗ ಜಾಮಿಅ ಅಹ್ಮದಿಯಾದ ಪ್ರಿನ್ಸ್‌ಪಾಲ್ ಆಗಿದ್ದ ಸಯ್ಯದ್ ಮೀರ್ ದಾಊದ್ ಅಹ್ಮದ್ ಸಾಹೇಬರು ಪದೇ ಪದೇ ಪತ್ರ ಬರೆದು ರಬ್‌ವಕ್ಕೆ ಮರಳಿಬರಬೇಕೆಂದು ಅಪೇಕ್ಷಿಸುತ್ತಿದ್ದರು. ಆ ಕಾರಣದಿಂದ ಅವರು ರಬ್‌ವಕ್ಕೆ ಮರಳಿ ಬರುವಂತಾಯಿತು. ಮಹ್‌ಮೂದ್ ಸಾಹೇಬರು ಹೇಳುತ್ತಾರೆ: ನನ್ನ ತಂದೆಯವರು ನನ್ನ ಬಗ್ಗೆ ಮಾಡಿದ ಪ್ರಾರ್ಥನೆಗಳು ಸಹ ನನ್ನ ಜೀವಿತದಲ್ಲಿ ಬಹಳಷ್ಟು ಪ್ರಭಾವ ಬೀರಿದೆ. ಅವರು ರಬ್‌ವದಲ್ಲಿ ಕಲಿಯಿತ್ತಿದ್ದಾಗ ತನ್ನ ತಂದೆಯವರಿಗೆ ಹೀಗೆ ಬರೆದಿದ್ದರು:– ಇಲ್ಲಿನ ಹವಾಮಾನ ಬಹಳ ಕೆಟ್ಟದ್ದಾಗಿವೆ. ಕುಡಿಯಲು ನೀರು ಇಲ್ಲ. ಕಠಿಣ ಸೆಖೆ ಇದೆ. ತಿನ್ನಲು ಕುಡಿಯಲು ಬಹಳ ಕಷ್ಟವಿದೆ, ಇತ್ಯಾದಿ. ಹೀಗೆ ಬರೆದಾಗ ಅವರ ತಂದೆಯವರು ನೀಡಿದ ಉತ್ತರ ಈರೀತಿಯಿತ್ತು. ಮಕ್ಕದಲ್ಲಿ ಸಹ ಬಹಳ ಕಷ್ಟದ ಸ್ಥಿತಿ ಇತ್ತು. ಪವಿತ್ರ ಖುರ್‌ಆನಿನ ಸೂರ ಇಬ್ರಾಹಿಮ್ ವಚನ–

**ರಬ್ಬನಾ ಇನ್ನೀ ಅಸ್‌ಕನ್‌ತು ಮಿನ್‌ಝುರ್ರಿಯತೀ ಬಿ ವಾದಿನ್ ಗೈರ ಝೀ ಝರ್‌ಇನ್.**

ಅರ್ಥ: ನಮ್ಮ ಪ್ರಭೂ, ನನ್ನ ಸಂತಾನಗಳಲ್ಲಿ ಕೆಲವರನ್ನು ಬಂಜರು ಕಣಿವೆ ಪ್ರದೇಶದಲ್ಲಿ ನೆಲೆಸುವಂತೆ ನಾನು ಮಾಡಿರುತ್ತೇನೆ.

ಈ ವಚನವನ್ನು ಉಲ್ಲೇಖಿಸಿ ಅವರ ತಂದೆಯವರು ಹೀಗೆ ಉಪದೇಶಿಸಿದರು: ಖಲೀಫರು ಸ್ಥಾಪಿಸಿದ ಪಟ್ಟಣದಲ್ಲಿ ನಿನಗೆ ವಾಸಿಸಲು ಸಾಧ್ಯವಿಲ್ಲವೆಂದಾದರೆ, ಪಿತನೊಂದಿಗೆ ಇರುವ ಸಂಬಂಧವೂ ಅರ್ಥಶೂನ್ಯವಾಗಿದೆ.

ಮಹ್‌ಮೂದ್ ಸಾಹೇಬರು ಹೇಳುತ್ತಾರೆ: ಅದರ ನಂತರ ನನ್ನ ಜೀವಿತದಲ್ಲಿ ಬಹಳ ಗಾಢವಾದ ಬದಲಾವಣೆ ಉಂಟಾಯಿತು.

ಮಹ್‌ಮೂದ್ ಸಾಹೇಬರು ನಿಧನ ಹೊಂದಿದ ನಂತರ ಆಸ್ಟ್ರೇಲಿಯಾದ ಅಮೀರರಾಗಿ ನೇಮಿಸಲ್ಪಟ್ಟ ಖಾಲಿದ್ ಸೈಫುಲ್ಲಾ ಹೀಗೆ ಹೇಳುತ್ತಾರೆ: ಮಹ್‌ಮೂದ್ ಸಾಹೇಬರು ಒಮ್ಮೆ ನನ್ನೊಂದಿಗೆ ಹೇಳಿದರು:– 1979ರಲ್ಲಿ ಖುದ್ದಾಮುಲ್ ಅಹ್ಮದಿಯಾದ ಇಂಟರ್‌ನೇಶನಲ್ ಸದರ್ ಹುದ್ದೆಗೆ ಚುನಾವಣೆ ನಡೆಯಿತು. ಆಗ ಚುನಾವಣೆಯಲ್ಲಿ ಅವರಿಗೆ ಐದನೇ ಸ್ಥಾನ ಲಭಿಸಿತ್ತು. ಹರ್ಝ್‌ರತ್ ಖಲೀಫತುಲ್ ಮಸೀಹ್ ಸಾಲಿಸ್ (ರಹಿಮಹುಲ್ಲಾಹು ತಆಲಾ)ರವರಿಗೆ ಅವರ ಬಗ್ಗೆ ವಿಶಿಷ್ಟ ವಾತ್ಸಲ್ಯವಿತ್ತು. ಹುಝೂರ್ ಅವರೊಂದಿಗೆ ಹೇಳಿದರು: ಇಂದು ಸಾಯಂಕಾಲ ತನಕ ಬಹಳ ಇಸ್ತಿಗ್‌ಫಾರ್ ದುಆ ಮಾಡುತ್ತಾ ಇರಬೇಕು. ಮಹ್ಮೂದ್ ಸಾಹೇಬರು ಹೇಳುತ್ತಾರೆ: ಆಗ ನನಗೆ ಬಹಳ ಹೆದರಿಕೆ ಆಯಿತು. ನನ್ನಿಂದ ಏನು ತಪ್ಪಾಗಿದೆ ಎಂದು ನಾನು ಯೋಚಿಸಿದೆ. ನಾನು ಐದನೆಯ ಸ್ಥಾನ ಪಡೆದಿದ್ದರೂ ನನ್ನನ್ನು ಸದರ್ ಖುದ್ದಾಮುಲ್ ಅಹ್ಮದಿಯಾ ಆಗಿ ನೇಮಿಸಿದಾಗ ನನಗೆ ತಿಳಿಯಿತು – ನನ್ನನ್ನು ವಿನಯದ ಕಡೆಗೆ ಶ್ರದ್ಧೆ ನೀಡುವಂತೆ ಮಾಡಲು ಹಾಗೆ ಆಜ್ಞಾಪಿಸಿದ್ದರು ಎಂದು.

ಇದು ಎಲ್ಲಾ ಹುದ್ದೇದಾರರಿಗೂ ಪಾಠ ನೀಡುತ್ತದೆ. ಹುದ್ದೇದಾರರಾಗಿ ಚುನಾಯಿಸಲ್ಪಡುವವರು ಇಸ್ತಿಗ್‌ಫಾರ್ ಮತ್ತು ದುರೂದ್ ಬಹಳ ಹೆಚ್ಚು ಮಾಡಬೇಕು. ಅವರಲ್ಲಿ ವಿನಯ ಯಾವಾಗಲೂ ನೆಲೆನಿಲ್ಲಲು ಮತ್ತು ಜಮಾಅತಿಗೆ ಸೇವೆ ಸಲ್ಲಿಸುವ ಭಾಗ್ಯವನ್ನು ಅಲ್ಲಾಹನು ನೀಡಲು ಇದು ಆವಶ್ಯಕವಾಗಿದೆ.

ಆ ಕಾಲದಲ್ಲಿ ಖುದ್ದಾಮುಲ್ ಅಹ್ಮದಿಯಾದ ಒಬ್ಬರೇ ಜಾಗತಿಕ ಸದರ್ ಇರುತ್ತಿದ್ದರು. ದೇಶಗಳಲ್ಲಿ ಖಾಯಿದ್‌ಗಳು ಮಾತ್ರ ಇದ್ದರು. ಈ ವ್ಯವಸ್ಥೆ ಮಹ್‌ಮೂದ್ ಸಾಹೇಬರು ಜಾಗತಿಕ ಸದರ್ ಆಗಿ ಚುನಾಯಿಸಲ್ಪಟ್ಟ ನಂತರ ಕೊನೆಗೊಂಡಿತು. ಅವರು ಖುದ್ದಾಮುಲ್ ಅಹ್ಮದಿಯಾದ ಕೊನೆಯ ಜಾಗತಿಕ ಸದರ್ ಆಗಿದ್ದರು. ಅವರು ತನ್ನ ಹುದ್ದೆಯ ಕೊನೆಯ ಘಟ್ಟದಲ್ಲಿ ಒಂದು ಪತ್ರ ಬಹಳ ವಿನಯದಿಂದ ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ತಆಲಾರಿಗೆ ಬರೆದಿದ್ದರು. ಅದಕ್ಕೆ ಉತ್ತರವಾಗಿ ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ ಹೀಗೆ ಉತ್ತರ ನೀಡಿದರು: ನೀವು ಅನಾವಶ್ಯಕವಾಗಿ ನಿಮ್ಮ ಕೆಲಸದ ಬಗ್ಗೆ ನಾಚಿಕೆ ಸೂಚಿಸಿದ್ದೀರಿ. ನೀವು ನಾಚಿಕೆ ಪಡುವ ಆವಶ್ಯಕತೆ ಇಲ್ಲ. ನೀವು ಅಲ್ಲಾಹನ ಅನುಗ್ರಹದಿಂದ ಚೆನ್ನಾಗಿ ಕೆಲಸ ಮಾಡಿರುವಿರಿ. ಬಹಳ ಕಷ್ಟದ ಕಾಲದಲ್ಲಿ ಬಹಳ ಚೆನ್ನಾಗಿಯೂ ಜಾಣ್ಮೆಯಿಂದಲೂ ಧೈರ್ಯದಿಂದಲೂ ಕೆಲಸ ಮಾಡಿರುವಿರಿ. ಅಲ್ಲಾಹನು ನಿಮಗೆ ಅನುಗ್ರಹ ನೀಡಲಿ. ನೀವು ಅನ್‌ಸಾರುಲ್ಲಾ ಪ್ರವೇಶಿಸಿದರೂ ನಿಮಗೆ ಖುದ್ದಾಮುಲ್ ಅಹ್ಮದಿಯಾದ ಸೇವೆಯಲ್ಲಿ ಮುಂದುವರಿಯಲು ಸಂದರ್ಭ

ಲಭಿಸಿತು (ಅವರಿಗೆ ಒಂದು ವರ್ಷದ ಹೆಚ್ಚಿನ ಸೇವೆ ಮಾಡಲು ಅನುಮತಿ ನೀಡಲಾಗಿತ್ತು). ನೀವು ಅದಕ್ಕೆ ಅರ್ಹರಲ್ಲವೆಂದಾಗಿದ್ದರೆ ಖಂಡಿತ ಹೀಗೆ ಆಗುತ್ತಿರಲಿಲ್ಲ. ಇನ್ನು ಮುಂದೆ ಸಹ ಜಮಾಅತಿಗೋಸ್ಕರ ನಿಸ್ವಾರ್ಥ ಸೇವೆ ಸಲ್ಲಿಸುವ ಭಾಗ್ಯವನ್ನು ಅಲ್ಲಾಹನು ನಿಮಗೆ ನೀಡಲಿ.''

ಖಾಲಿದ್ ಸೈಫುಲ್ಲಾ ಸಾಹೇಬರು ಹೀಗೆ ಸಹ ಬರೆದಿದ್ದಾರೆ. ನನ್ನೊಂದಿಗೆ ಮಹ್‌ಮೂದ್ ಸಾಹೇಬರು ಹೇಳಿದ್ದರು: ನಾನು ರಬ್‌ವಕ್ಕೆ ಕಲಿಯಲು ಹೋದಾಗ ನನ್ನೊಂದಿಗೆ ಬೇರೆ ವಿದ್ಯಾರ್ಥಿಗಳೂ ಇದ್ದರು. ನಾವು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರನ್ನು ಭೇಟಿಯಾಗಲು ಹೋಗಿದ್ದಾಗ ಹುಝೂರ್ ಒಂದು ಚಾಪೆಯಲ್ಲಿ ಮಲಗಿದ್ದರು. ನಾವು ಅವರ ಸಮೀಪ ನೆಲದಲ್ಲಿ ಕುಳಿತಿದ್ದೆವು. ಹುಝೂರ್ ನಮಗೆ ವಕ್ಫ್‌ನ ಮಹತ್ವ ಮತ್ತು ತ್ಯಾಗದ ಬಗ್ಗೆ ಉಪದೇಶಿಸಿದರು. ಆಗ ಹುಝೂರ್ ತನ್ನ ಒಂದು ಕೈಯನ್ನು ನನ್ನ ಮೇಲೆ ಇರಿಸಿದ್ದರು. ಏಕೆಂದರೆ ನಾನು ಅವರ ಸಮೀಪದಲ್ಲಿದ್ದೆ. ಆನಂತರ ಏನು ಸಂಭವಿಸಿತೆಂದರೆ ನನ್ನ ಹೊರತು ಉಳಿದ ಎಲ್ಲಾ ಹುಡುಗರು ರಬ್‌ವದ ಹವಾಮಾನ ಮತ್ತು ಅಲ್ಲಿನ ಆಹಾರ ಮೊದಲಾದುವುಗಳು ಅವರಿಗೆ ಹಿಡಿಸದ ಕಾರಣ ತಮ್ಮ ಮನೆಗಳಿಗೆ ಮರಳಿ ಹೋದರು. ನಾನು ಮಾತ್ರ ವಿದ್ಯಾಭ್ಯಾಸ ಪೂರ್ಣಗೊಳಿಸಿ 'ವಾಕಿಫೇ ಝಿಂದಗೀ' ಆದೆನು. ಇದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಸ್ಪರ್ಶದಿಂದ ದೊರೆತ ಭಾಗ್ಯವೆಂದು ನಾನು ಭಾವಿಸುತ್ತೇನೆ.

ಖಾಲಿದ್ ಸೈಫುಲ್ಲಾ ಸಾಹೇಬರು ಮತ್ತೂ ಹೀಗೆ ಬರೆದಿದ್ದಾರೆ: ''ಅಮೀರ್ ಸಾಹೇಬರು ಬಹಳ ಬುದ್ಧಿಶಾಲಿಯಾಗಿದ್ದರು. ಜನರೊಂದಿಗೆ ಸಂಬಂಧ ಸ್ಥಾಪಿಸಿ ಮುಂದುವರಿಸುವ ನೈಪುಣ್ಯ ಹೊಂದಿದ್ದರು. ಹಾಗೂ ಜಮಾಅತಿನ ಒಳಿತಿಗಾಗಿ ಅವರು ಅದನ್ನು ಬಳಸಿದರು. ಈ ಕಾರಣದಿಂದ ಅಹ್ಮದಿಯರಿಗೆ ಆಸ್ಟ್ರೇಲಿಯಾ ದೇಶಕ್ಕೆ ವಲಸೆ ಬರಲು ಸಹಾಯವಾಯಿತು. ಅಮೀರ್ ಸಾಹೇಬರು ಆಸ್ಟ್ರೇಲಿಯಕ್ಕೆ ಆಗಮಿಸುವಾಗ ಇಲ್ಲಿ ಪಾಕಿಸ್ತಾನಿ ಅಹ್ಮದಿಯರ ಸಂಖ್ಯೆ ಕೆಲವು ನೂರುಗಳಷ್ಟು ಮಾತ್ರ ಇತ್ತು. ಈಗ ಅದು ಸಾವಿರಗಳನ್ನು ತಲಪಿದೆ. ಇದು ಈಗಲೂ ಮುಂದುವರಿಯುತ್ತಿದೆ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರ ಉಪದೇಶ ಪ್ರಕಾರ ಅಹ್ಮದಿಯರನ್ನು ಆಸ್ಟ್ರೇಲಿಯದ ಎಲ್ಲಾ ದೊಡ್ಡ ನಗರಗಳಲ್ಲಿ ನೆಲೆಸುವಂತೆ ಮಾಡಲಾಗಿತ್ತು. ಈಗ ಆಸ್ಟ್ರೇಲಿಯಾದ ಪ್ರತಿಯೊಂದು ಪ್ರಾಂತ್ಯದ ರಾಜಧಾನಿಗಳಲ್ಲಿ ಬಲಿಷ್ಠ ಜಮಾಅತ್‌ಗಳು ಸುಂದರ ಮಸ್‌ಜಿದ್‌ಗಳು ಮತ್ತು ಮಿಶನ್ ಹೌಸ್‌ಗಳು ಸ್ಥಾಪಿತವಾಗಿವೆ. ಸಿಡ್ನಿಯಲ್ಲಿ ಮಸ್‌ಜಿದ್ ಬೈತುಲ್ ಹುದಾ, ಖಿಲಾಫತ್ ಸೆಂಟಿನರಿ ಹಾಲ್, ಮತ್ತು ಮಿಶನ್ ಹೌಸ್ ಇವೆ. ಅಲ್ಲದೆ, ಒಂದು ಗೆಸ್ಟ್ ಹೌಸ್ ಸಹ ನಿರ್ಮಿಸಲಾಗುತ್ತಿದೆ. ಬ್ರಿಸ್‌ಬೇನ್‌ನಲ್ಲಿ ಸಹ ಮಸ್‌ಜಿದ್ ನಿರ್ಮಾಣವಾಗಿದೆ. ಮೆಲ್‌ಬರ್ನ್‌ನಲ್ಲಿ ಮಸ್‌ಜಿದ್ ಇದೆ. ಎಡ್‌ಲೈಡ್‌ನಲ್ಲಿ ಜಮಾಅತ್ ಕೇಂದ್ರವಿದೆ. ಕೆನ್‌ಬೆರಾದಲ್ಲಿ ಮಸ್‌ಜಿದ್‌ಗೋಸ್ಕರ ಸ್ಥಳ ಖರೀದಿಸಲು ಪ್ರಯತ್ನಿಸಲಾಗುತ್ತಿದೆ. ಬೇಗನೆ ಖರೀದಿಸಲಾಗುವುದು. ಹಾಗೆ ಆಸ್ಟ್ರೇಲಿಯಾದ ಜಮಾಅತ್‌ಗಳ ಅಭಿವೃದ್ಧಿಗೋಸ್ಕರ ಮಹ್‌ಮೂದ್ ಸಾಹೇಬರು ಅಲ್ಲಾಹನ ಅನುಗ್ರಹದಿಂದ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆಸ್ಟ್ರೇಲಿಯಾದ ನೇಶನಲ್ ತರ್‌ಬಿಯತ್ ಸೆಕ್ರಟರಿ ಆಗಿರುವ ಇಮ್ರಾನ್ ಅಹ್‌ಸನ್ ಸಾಹಿಬ್ ಹೀಗೆ ಹೇಳುತ್ತಾರೆ: 1991ರಿಂದ ಅಮೀರ್ ಸಾಹೇಬರು ಮಿಶನರಿ ಇನ್‌ಚಾರ್ಜ್ ಮತ್ತು ಅಮೀರ್ ಜಮಾಅತ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಕಾಲದಲ್ಲಿ ಅನೇಕ ನಿರ್ಮಾಣ ಯೋಜನೆಗಳು ಕಾರ್ಯಗತವಾದುವು. ಜಮಾಅತ್ ಸದ್ಯಸರ ಸಂಖ್ಯೆ ಬಹಳ ಕಡಿಮೆ ಇದ್ದರೂ ಇದು ಸಾಧ್ಯವಾಯಿತು.

ವಿಕ್ಟೋರಿಯಾ ಜಮಾಅತಿನ ಸದರ್ ಆಗಿರುವ ಜಾವೀದ್ ಸಾಹೇಬರು ಹೀಗೆ ಬರೆಯುತ್ತಾರೆ: ಅಮೀರ್ ಸಾಹೇಬರು ಚಿಕ್ಕ ಚಿಕ್ಕ ವಿಷಯಗಳ ಬಗ್ಗೆ ಸಹ ನೀಡುತ್ತಿದ್ದ ಮಾರ್ಗದರ್ಶನ ದೂರದರ್ಶಿತ್ವದಿಂದಲೂ ಜಾಣ್ಮೆಯಿಂದಲೂ ತುಂಬಿತ್ತು ಎನ್ನುವುದರ ಬಗ್ಗೆ ಎಲ್ಲರೂ ಹೇಳುತ್ತಿದ್ದಾರೆ. ಅಮೀರ್ ಸಾಹೇಬರ ಹಳೆಯ ವಾಹನ ಬದಲಿಸಲು ಮಜ್ಲಿಸೆ ಆಮಿಲ ಪದೇ ಪದೇ ಹೇಳಿದರೂ, ನಾನು ಸ್ವತಃ ಹೇಳಿದರೂ ಅಮೀರ್ ಸಾಹೇಬರು ಹೊಸ ವಾಹನ ಖರೀದಿಸಲಿಲ್ಲ. ಇತರ ಮುಬಲ್ಲಿಗರಿಗೆ ಹೊಸ ವಾಹನ ನೀಡಿದರೂ ತಮ್ಮ ಬಗ್ಗೆ ಚಿಂತಿಸಲಿಲ್ಲ. ಮಹ್‌ಮೂದ್ ಸಾಹೇಬರ ಪುತ್ರಿ ಹೀಗೆ ಬರೆಯುತ್ತಾರೆ: ಅವರಿಗೆ ಬಟ್ಟೆಬರೆಗಳ ಬಗ್ಗೆ ಹೆಚ್ಚಿಗೆ ಆಸಕ್ತಿ ಇರಲಿಲ್ಲ. ಶರೀರಕ್ಕೆ ಸುಖಕರವಾದ ಬಟ್ಟೆ ಸಾಕು ಹೆಚ್ಚಿಗೆ ಖರ್ಚು ಮಾಡುವ ಆವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದರು. ಅವರು ಜಮಾಅತಿನ ಹಣವನ್ನು ಬಹಳ ಜಾಗರೂಕತೆಯಿಂದ ಖರ್ಚು ಮಾಡುತ್ತಿದ್ದರು. ಅವರ ನೆನಪಿನ ಶಕ್ತಿ ಬಹಳ ಚೆನ್ನಾಗಿತ್ತು. ಅವರು ಜಮಾಅತಿನ ಸದಸ್ಯರ ಹೆಸರು ನೆನಪಿನಲ್ಲಿಡುತ್ತಿದ್ದರು. ಜಮಾಅತಿನ ಸದಸ್ಯರ ನೈಪುಣ್ಯತೆಗಳನ್ನು ಸರಿಯಾದ ರೀತಿಯಲ್ಲಿ ಬಳಸುವ ಶಕ್ತಿ ಅವರಿಗೆ ಅಲ್ಲಾಹನಿಂದ ವರದಾನವಾಗಿ ಲಭಿಸಿತ್ತು.

ತಾಹಿರ ಅತ್‌ಹರ್ ಸಾಹಿಬ ಎಂಬ ಮಹಿಳೆ ಹೀಗೆ ಬರೆಯುತ್ತಾರೆ: ಆಸ್ಟ್ರೇಲಿಯಾದ ಜಲ್ಸಾ ಸಾಲಾನದ ನಂತರ ಮಸ್‌ಜಿದ್‌ನಲ್ಲಿದ್ದ ಅತಿಥಿಗಳ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಲು ಒತ್ತಾಯಪೂರ್ವಕವಾಗಿ ಆದೇಶಿಸುತ್ತಿದ್ದರು. ನಮಾಝ್‌ಗಳ ಬಗ್ಗೆ ಸಹ ವಿಶೇಷ ಗಮನ ನೀಡಲು ಆದೇಶಿಸುತ್ತಿದ್ದರು.

ನನ್ನ ಜೊತೆಗೆ ಪ್ರಯಾಣಿಸಿದ ಪ್ರೆಸ್ ಇನ್‌ಚಾರ್ಜ್ ಆಬಿದ್ ವಹೀದ್ ಹೇಳುತ್ತಾರೆ: ಮಹ್‌ಮೂದ್ ಸಾಹೇಬರನ್ನು ಬಹಳ ಸಮೀಪದಿಂದ ಕಾಣಲು ಸಾಧ್ಯವಾಯಿತು. ಅವರ ಆರೋಗ್ಯ ಚೆನ್ನಾಗಿರಲಿಲ್ಲವಾದರೂ ಅತ್ಯಂತ ಚಿಕ್ಕ ವಿಷಯದ ಬಗ್ಗೆ ಸಹ ಅವರು ಗಮನ ಹರಿಸುತ್ತಿದ್ದರು. ಉದಾಹರಣೆಗೆ ರಾತ್ರಿ ಊಟಕ್ಕೆ ನಮಗೆ ಮೊದಲನೆಯ ದಿನ ನೀಡಿದ ತರಕಾರಿಯೇ ಎರಡನೆಯ ದಿನ ಸಹ ಪಾಕಗೊಳಿಸಲಾಗಿತ್ತು. ನಾವು ಆ ವಿಷಯ ಗಮನಿಸಿರಲಿಲ್ಲ. ಆದರೆ ಮಹ್‌ಮೂದ್ ಸಾಹೇಬರು ಅದನ್ನು ಗಮನಿಸಿ ಪಾಕಶಾಲೆಗೆ ಹೋಗಿ ವಿಚಾರಿಸಿದರು. ಏನು ಇಲ್ಲಿ ಬೇರೆ ತರಕಾರಿ ಸಿಗುವುದಿಲ್ಲವೇ? ಎಂದು. ಈರೀತಿ ಅವರು ಅತಿಥಿಗಳ ಬಗ್ಗೆ ಬಹಳ ಶ್ರದ್ಧೆ ವಹಿಸುತ್ತಿದ್ದರು. ಅವರು ಬಹಳ ವಿನಯಶಾಲಿಗಳಾಗಿದ್ದರು. ಅವರು ಬಹಳ ಜ್ಞಾನವಂತರೂ ಅನುಭವಶಾಲಿಗಳೂ ಆಗಿದ್ದರೂ ಕೂಡ ಪ್ರೆಸ್ ಮತ್ತು

ಸಂಪರ್ಕ ಮಾದ್ಯಮಗಳ ಬಗ್ಗೆ ನನ್ನಿಂದ ಸಲಹೆ ಕೇಳಲು ಸಂಕೋಚಪಡುತ್ತಿರಲಿಲ್ಲ. ಅವರು ಜಮಾಅತ್ ವ್ಯವಸ್ಥೆಗೆ ಗೌರವ ನೀಡುತ್ತಿದ್ದರು. ಅವರಿಗೆ ಖಿಲಾಫತ್‌ನೊಂದಿಗೆ ಹೃತ್ಪೂರ್ವಕ ಪ್ರೇಮಾದರಗಳಿದ್ದುವು.

ಇಮಾಮ್ ಮಸ್‌ಜಿದ್ ಲಂಡನ್, ಅತಾಉಲ್ ಮುಜೀಬ್ ರಾಶಿದ್ ಸಾಹೇಬರು ಹೇಳುತ್ತಾರೆ: ಮಹ್ಮೂದ್ ಸಾಹೇಬರು ಅತ್ಯಂತ ನಿಷ್ಠಾವಂತರಾದ, ತೋರಿಕೆಗಳಿಲ್ಲದ ಒಳ್ಳೆಯ ಮನುಷ್ಯರಾಗಿದ್ದರು. 2004ರಲ್ಲಿ ನಾನು ಒಂದು ತಿಂಗಳ ಕಾಲ ಆಸ್ಟ್ರೇಲಿಯಾದಲ್ಲಿದ್ದಾಗ ಮಹ್ಮೂದ್ ಸಾಹೇಬರ ಸದ್ಗುಣಗಳ ಪರಿಚಯ ನನಗೆ ಆಯಿತು. ಅವರು ಖಿಲಾಫತ್ ಬಗ್ಗೆ ಹೊಂದಿದ್ದ ಪ್ರೀತಿ ಮತ್ತು ಅನುಸರಣೆ ಎಲ್ಲದಕ್ಕಿಂತಲೂ ಮಿಗಿಲಾಗಿತ್ತು. ಬೆಳಗ್ಗಿನ ಗಾಳಿ ಸವಾರಿ ಕಾಲದಲ್ಲಿ ಇದೇ ವಿಷಯದ ಬಗ್ಗೆ ಮಾತನಾಡುತ್ತಿದ್ದರು. ಜಮಾಅತಿನ ಅಭಿವೃದ್ಧಿ ಮತ್ತು ಜಮಾಅತಿನ ಕೆಲಸಗಳಲ್ಲಿ ಭಾಗವಹಿಸುವ ಬಗ್ಗೆ ಚರ್ಚಿಸುತ್ತಿದ್ದರು. ಅನೇಕ ಕುಂದು ಕೊರತೆಗಳು ಇರುವ ಬಗ್ಗೆ ಬಹಳ ದುಃಖದಿಂದ ಹೇಳುತ್ತಿದ್ದರು. ನಾವು ಜೊತೆಗೆ ಸೇರಿ ಜಮಾಅತ್‌ಗಳನ್ನು ಸಂದರ್ಶಿಸುವಾಗ ಪ್ರತಿಯೊಂದು ಜಮಾಅತ್‌ಗೆ ಯಾವ್ಯಾವ ವಿಷಯಗಳ ಬಗ್ಗೆ ಒತ್ತಿಹೇಳಬೇಕೆಂದು ನನ್ನೊಂದಿಗೆ ಹೇಳುತ್ತಿದ್ದರು.

ಅವರು ಜಮಾಅತ್‌ಗೆ ಸೇವೆ ಮಾಡಲು ಪ್ರಾರಂಭಿಸಿದುದು ರಬ್‌ವದ ನಾಸಿರ್ ಹಾಸ್ಟೆಲ್ ವಾರ್ಡನ್ ಆಗಿ. ಅನಂತರ ರಬ್‌ವದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಮುಹ್‌ತಮಿದ್ ಆದರು. 1977ರಿಂದ 1979ರ ತನಕ ಈ ಹುದ್ದೆಯಲ್ಲಿದ್ದರು. 1979ರಲ್ಲಿ ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮರ್‌ಕಝಿಯದ ಉನ್ನತ ಜವಾಬ್ದಾರಿ ನೀಡಲಾಯಿತು. 1979ರಿಂದ 1989ರ ತನಕ ಹತ್ತು ವರ್ಷ ಅವರು ಸದರ್ ಖುದ್ದಾಮುಲ್ ಅಹ್ಮದಿಯಾ ಆಗಿದ್ದರು. ನಾನು ಹಿಂದೆ ಹೇಳಿದ ಹಾಗೆ ಅವರು ಖುದ್ದಾಮುಲ್ ಅಹ್ಮದಿಯಾದ ಕೊನೆಯ ಅಂತಾರಾಷ್ಟ್ರೀಯ ಸದರ್ ಆಗಿದ್ದರು. ಅನಂತರ ಖುದ್ದಾಮುಲ್ ಅಹ್ಮದಿಯಾ ಬೇರೆ ಬೇರೆಯಾಗಿ ರಾಷ್ಟ್ರೀಯ ನೆಲೆಯಲ್ಲಿ ಸ್ಥಾಪಿಸಲ್ಪಟ್ಟಿತು. ಇಸ್ಲಾಹೋ ಇರ್‌ಶಾದ್ ವಿಭಾಗದಲ್ಲಿ ಅವರು ಸೇವೆ ಸಲ್ಲಿಸಿದ್ದರು. ನಾಲ್ಕನೆಯ ಖಿಲಾಫತ್ ಕಾಲದಲ್ಲಿ ಮರ್ಕಝೀ ಶುಅಬ ಸಮ್‌ಈ ಬಸ್‌ರೀ ಸ್ಥಾಪಿತವಾದಾಗ ಅವರು 1983 ನವಂಬರ್‌ನಲ್ಲಿ ಅದರ ಮೇಲ್ವಿಚಾರಕರಾದರು. ನಂತರ 1991 ಜೂನ್ ದಿನಾಂಕ 28ರಿಂದ ತಮ್ಮ ಕೊನೆಯುಸಿರು ತನಕ ಅವರು ಆಸ್ಟ್ರೇಲಿಯಾದ ಅಮೀರ್ ಆಗಿ ಸೇವೆ ಸಲ್ಲಿಸಿದರು. ಅಲ್ಲಾಹನು ಅವರಿಗೆ ಶ್ರೇಷ್ಠ ಅನುಗ್ರಹ ನೀಡಲಿ. ಅವರ ಆಧ್ಯಾತ್ಮಿಕ ಪದವಿ ಉನ್ನತಗೊಳಿಸುತ್ತಾ ಇರಲಿ. ಅವರು ನಿಸ್ವಾರ್ಥಿಯೂ ತಮ್ಮ ಎಲ್ಲಾ ನೈಪುಣ್ಯತೆಗಳೊಂದಿಗೆ ಜಮಾಅತಿಗೆ ಸೇವೆ ಸಲ್ಲಿಸಿದಂತಹ ಹಿರಿಯ ವ್ಯಕ್ತಿಯೂ ಆಗಿದ್ದರು. ಅವರು ತಮ್ಮ ಆರೋಗ್ಯವನ್ನು ಲಕ್ಷಿಸದೆ ಜಮಾಅತ್ ಕೆಲಸಗಳಿಗೆ ಯಾವುದೇ ಅಡ್ಡಿ ಉಂಟಾಗದಂತೆ ನೋಡಿಕೊಂಡರು. ನಾನು ಇತೀಚೆಗೆ ಆಸ್ಟ್ರೇಲಿಯಕ್ಕೆ ಭೇಟಿನೀಡಿದಾಗ ಅವರು ಆರೋಗ್ಯ ದೃಷ್ಟಿಯಲ್ಲಿ ಕಷ್ಟ ಪಡುತ್ತಿದ್ದರೂ ಪ್ರತಿಯೊಂದು ಕೆಲಸದ ಬಗ್ಗೆ ಶ್ರದ್ಧೆ ವಹಿಸುತ್ತಿದ್ದರು.

ನಾನು ಖುದ್ದಾಮುಲ್ ಅಹ್ಮದಿಯಾದಲ್ಲಿ ಅವರ ಕೈ ಕೆಳಗೆ ಕೆಲಸ ಮಾಡಿರುವೆನು. ಅವರು ತಮ್ಮ ಕೈಕೆಳಗಿದ್ದುದರಿಂದ ಬಹಳ ಉತ್ತಮವಾಗಿ ಕೆಲಸ ಮಾಡಿಸುತ್ತಿದ್ದರು. ಕೆಲಸ ಮಾಡಲು ಸಂದರ್ಭ ನೀಡುತ್ತಿದ್ದರು ಮತ್ತು ಕೆಲಸದ ಬಗ್ಗೆ ಮೆಚ್ಚಿಗೆ ಸಹ ಸೂಚಿಸುತ್ತಿದ್ದರು. ಅವರು ಖಿಲಾಫತ್‌ಗೆ ಎಂತಹ ಸುಲ್ತಾನೆ ನಸೀರ್(ಬಲಿಷ್ಠನಾದ ಸಹಾಯಕ) ಆಗಿದ್ದರೆಂದರೆ ಅಂತಹ ಉದಾಹರಣೆ ಬಹಳ ಕಡಿಮೆ ಸಿಗುತ್ತವೆ. ನಾನು ಅದರ ಬಗ್ಗೆ ನನ್ನ ಖುತುಬದ ಪ್ರಾರಂಭದಲ್ಲಿ ಪ್ರಸ್ತಾಪಿಸಿರುವೆನು. ಅವರ ನಿಧನದಿಂದ ಆಸ್ಟ್ರೇಲಿಯದ ಜಮಾಅತ್‌ನಲ್ಲಿ ಒಂದು ಶೂನ್ಯತೆ ತಲೆದೋರಿದೆಯಾದರೂ ದೈವಿಕ ಜಮಾಅತ್‌ಗಳನ್ನು ಅಲ್ಲಾಹನೇ ಮುನ್ನಡೆಸುತ್ತಾನೆ ಮತ್ತು ಇಂತಹ ಶೂನ್ಯತೆಗಳನ್ನು ಅವನೇ ಭರ್ತಿ ಮಾಡುತ್ತಾನೆ. ಅಲ್ಲಾಹನು ಅನುಗ್ರಹ ನೀಡಲಿ. ಅವರ ಹಾಗೆ ಇರುವ ಸುಲ್ತಾನೆ ನಸೀರ್ ಯಾವಾಗಲೂ ಅಲ್ಲಾಹನು ಜಮಾಅತಿಗೆ ದಯಪಾಲಿಸುತ್ತಾ ಇರಲಿ. ಅವರು ಖಿಲಾಫತ್‌ಗೆ ನಿಷ್ಠಾವಂತರಾಗಿರುವವರೂ ಬಲಿದಾನ ಅರ್ಪಿಸುವವರೂ ತಮ್ಮ ಹುದ್ದೆಗಳ ಕರ್ತವ್ಯಗಳನ್ನು ಈಡೇರಿಸುವವರೂ ಆಗಲಿ. ಅಲ್ಲಾಹನು ಅವರ ಪತ್ನಿಯ ಮತ್ತು ಮಕ್ಕಳ ಸಂರಕ್ಷಕನಾಗಲಿ. ಮಕ್ಕಳು ತಮ್ಮ ಪಿತನ ಹಾಗೆ ವಿಶ್ವಾಸದಲ್ಲೂ ಬಲಿಷ್ಠರಾಗಿ ಖಿಲಾಫತ್‌ನೊಂದಿಗೆ ಬಲಯುತವಾದ ಸಂಬಂಧವನ್ನು ಹೊಂದುವವರಾಗಲಿ. ಮಕ್ಕಳು ತಮ್ಮ ಮಾತೆಯ ಸೇವೆಯನ್ನು ಮಾಡುವ ಅನುಗ್ರಹವನ್ನೂ ಪಡೆಯುವವರಾಗಲಿ–ಆಮೀನ್.

ಜುಮುಅ ನಮಾಝ್ ನಂತರ ಇನ್‌ಶಾ ಅಲ್ಲಾಹ್ ಅವರ ನಮಾಝ್ ಜನಾಝ ಗಾಯಿಬ್ ಅನುಷ್ಠಿಸುವೆನು.

-----------------*****----------------

*Friday Sermon delivered by Hadrath Khaleefathul Masih Al Khamis(atba)*
*at Masjid Baithul Futhuh, London on 25-04-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team, *Ahmadiyya Muslim Jama`at, Karnataka*

**Contact Us**:
Darussalam, Ahmadiyya Muslim Mission,
Behind Deltawest Building, Near Railway Level Crossing,
Pandeshwar, Mangalore – 575 001

*Email*: **khutuba.kannada@gmail.com**